( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.33/2013

**ದಿನಾಂಕಃ 04-01-2024, ಪಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಎಂ ಟಿ ಎಸ್ ವಕೀಲರಿಂದಃ

ನಾನು ಈ ದಾವೆಯನ್ನು ಹಿಸ್ಸಾ ಕೋರಿ ದಾವೆಯನ್ನು ಹೂಡಿರುತ್ತೇನೆ. 24 ಸ್ವತ್ತುಗಳಲ್ಲಿ 1/7 ಭಾಗ ಹಿಸ್ಸೆ ಕೋರಿ ದಾವೆ ಹೂಡಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

24 ಸ್ವತ್ತುಗಳಲ್ಲಿ 7 ಸ್ವತ್ತುಗಳು ಹೊನ್ನವಳ್ಳಿ ಗ್ರಾಮಕ್ಕೆ ಸೇರಿರುತ್ತವೆ. ಸದರಿ 7 ಸ್ವತ್ತುಗಳ ಪೈಕಿ ಒಂದು ಸ್ವತ್ತನ್ನು ನನ್ನ ತಂದೆ ಕ್ರಯಕ್ಕೆ ಖರೀದಿಸಿರುತ್ತಾರೆ. ಉಳಿದ 6 ಸ್ವತ್ತುಗಳು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತುಗಳು. ಕೆಲ್ಲೂರು ಗ್ರಾಮಕ್ಕೆ ಸೇರಿದ 3 ಸ್ವತ್ತುಗಳಿಗೆ ದಾವೆ ಹೂಡಿದ್ದೇನೆ. ಅವುಗಳ ಸರ್ವೆ ನಂಬರ್ 87, 88 ಮತ್ತು 89. ಹೆಬ್ಬಾಲೆ ಗ್ರಾಮಕ್ಕೆ ಸೇರಿದ 5 ಸ್ವತ್ತುಗಳ ಮೇಲೆ ದಾವೆ ಹೂಡಿದ್ದೇನೆ. ದಡದಹಳ್ಳಿ ಗ್ರಾಮಕ್ಕೆ ಸೇರಿದ ಸ್ವತ್ತುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಷಣವಿನಕೊಪ್ಪಲು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ ನನಗೆ ನೆನಪಿಲ್ಲ.

ದಾವಾ ಐಟಂ ನಂ.24 ನನ್ನ ತಂದೆಯ ಹೆಸರಿನಲ್ಲಿದೆ. ಅದರ ಖಾತಾ ನಂಬರ್ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಹುಟ್ಟಿದಾಗಿನಿಂದ ಹೊನ್ನವಳ್ಳಿ ಗ್ರಾಮದ ನನ್ನ ಅಜ್ಜನ ಮನೆಯಲ್ಲಿ ವಾಸವಿದ್ದೇನೆ. ನಾನು ಮದುವೆಯಾದ ದಿನದಿಂದ ಹೊನ್ನವಳ್ಳಿ ಗ್ರಾಮದಲ್ಲಿ ವಾಸವಾಗಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನನ್ನ ಅಣ್ಣ ತಮ್ಮಂದಿರು ಹೊನ್ನವಳ್ಳಿ ಗ್ರಾಮದ ನನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದಾರೆ. ನಾನು ಈ ದಾವೆ ಸಲ್ಲಿಸುವ 25 ವರ್ಷಗಳ ಹಿಂದೆಯಿಂದಲೂ ಹೊನ್ನವಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ಸಂಬಂದ ಸಂಬಂದಪಟ್ಟ ದಾಖಲೆಗಳು ನನ್ನ ಬಳಿ ಇವೆ ಎಂದರೆ ಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ.

ನಾನು ಮತ್ತು ನನ್ನ ಅಣ್ಣ ತಮ್ಮಂದಿರು 25 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾನು ನನ್ನ ಹಿಸ್ಸೆಗೆ ಬಂದ ಜಮೀನುಗಳ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ನನ್ನ ಅಣ್ಣ ತನ್ನ ಹಿಸ್ಸೆ ಪಡೆದು ಹೆಬ್ಬಾಲೆ ಗ್ರಾಮದಲ್ಲಿ ವಾಸ ವಿದ್ದರು, ಹಾಗೆಯೇ ನನ್ನ ತಮ್ಮಂದಿರು ತಮ್ಮಗಳ ಹಿಸ್ಸೆ ಪಡೆದು ಹೊನ್ನವಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ, ಸಾಕ್ಷಿ ಮುಂದುವರೆದು ನನಗೆ ಒಂದು ಎಕರೆ ಜಮೀನು ಮಾತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 1 ನನ್ನ ತಂದೆಯ ಸ್ವಯರ್ಜಿತ ಆಸ್ತಿ ಎಂದರೆ ಸರಿ. ಸದರಿ ಸ್ವತ್ತನ್ನು ನನ್ನ ತಂದೆ ಯಾವಾಗ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 1985-86 ರಲ್ಲಿ ಖರೀದಿಸಿರಬಹುದು ಎಂದು ನುಡಿಯುತ್ತಾರೆ. ದಿಃ 20-10-2013 ರಂದು ನನ್ನ ತಂದೆ ಒಂದು ನೊಂದಾಯಿತ ಮರಣ ಶಾಸನ ಪತ್ರವನ್ನು 2 ರಿಂದ 4 ಹಾಗೂ 6 ನೇ ಪ್ರತಿವಾದಿಯರಿಗೆ ತಲಾ 19 ಗುಂಟೆ ಜಮೀನನ್ನು ಬರೆದಿರುತ್ತಾರೆ ಎಂದರೆ ಸರಿ. ಸದರಿ ಮರಣ ಶಾಸನ ಪತ್ರದ ರೀತ್ಯಾ2 ರಿಂದ 4 ಹಾಗೂ 6 ನೇ ಪ್ರತಿವಾದಿಯರು ಖಾತೆಯನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

ಮರಣ ಶಾಸನ ಪತ್ರ ಮಾಡಿರುವ ವಿಚಾರ ನನಗೆ 2010 ರಲ್ಲಿ ಗೊತ್ತಾಯಿತು. ಸದರಿ ಸ್ವತ್ತಿಗೆ ಸಂಬಂದಿಸಿದಂತೆ ಮರಣ ಶಾಸನ ಪತ್ರವನ್ನು ಪರಿಶೀಲಿಸಿಲ್ಲ ಹಾಗೂ ಅದನ್ನು ಪ್ರಶ್ನಿಸಿಲ್ಲ. ದಾವಾ ಐಟಂ ನಂ.2 ರಲ್ಲಿ ತಲಾ 8 ಗುಂಟೆ ಜಮೀನು 2 ರಿಂದ 4 ಮತ್ತು 6 ನೇ ಪ್ರತಿವಾದಿಯರು ಹಿಸ್ಸೆ ಮಾಡಿಕೊಂಡಿದ್ದಾರೆ, ಆ ಸ್ವತ್ತಿನಲ್ಲಿ ನನಗೆ ಹಿಸ್ಸೆ ಬರಬೇಕು. ದಾವಾ ಐಟಂ ನಂ.3 ರಲ್ಲಿ ತಲಾ 3 ಗುಂಟೆ ಜಮೀನು ನನಗೆ, 2 ರಿಂದ 4 ಹಾಗೂ 6 ನೇ ಪ್ರತಿವಾದಿಯರಿಗೆ ಹಿಸ್ಸೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.4 ರ ಜಮೀನಿನ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯಲ್ಲಿ 3 ಎಕರೆ 7 ಗುಂಟೆ ಜಮೀನು ಇದೆ. ದಾವಾ ಐಟಂ ನಂ.4 ರ ಸ್ವತ್ತು ನನ್ನ ಅಜ್ಜನ ಹೆಸರಿನಲ್ಲಿ ಇದೆ.

ದಾವಾ ಐಟಂ ನಂ.4 ರಲ್ಲಿ ಕೇವಲ 30 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ಜಮೀನು 2 ಮತ್ತು 6 ನೇ ಪ್ರತಿವಾದಿಯರಿಗೆ ತಲಾ 15 ಗುಂಟೆ ಜಮೀನು ಹಿಸ್ಸೆಯಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.5 ರ ಜಮೀನು 3 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.6 ರಿಂದ 8 ರ ಸ್ವತ್ತುಗಳ ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಐಟಂ ನಂ.7 ರ ಸ್ವತ್ತನ್ನು ನನ್ನ ತಂದೆ 1973 ರಲ್ಲಿ ಹಾಗೂ ದಾವಾ ಐಟಂ ನಂ. 6 ಮತ್ತು 8 ನ್ನು 1985-86 ರಲ್ಲಿ ನನ್ನ ತಂದೆ ಖರೀದಿಸಿರಬಹುದು. ದಾವಾ ಐಟಂ ನಂ.6 ರಿಂದ 8 ರ ಸ್ವತ್ತುಗಳನ್ನು 2 ರಿಂದ 4 ಮತ್ತು 6 ನೇ ಪ್ರತಿವಾದಿಯರಿಗೆ ಒಂದು ನೊಂದಾಯಿತ ಮರಣ ಶಾಸನ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನ ಪತ್ರದ ರೀತ್ಯಾ2 ರಿಂದ 4 ಮತ್ತು 6 ನೇ ಪ್ರತಿವಾದಿಯರು ದಾವಾ ಐಟಂ ನಂ.6 ರಿಂದ 8 ರ ಸ್ವತ್ತುಗಳ ಖಾತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ, ಆದರೆ ಹಾಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.1 ಮತ್ತು 6 ರಿಂದ 8 ರ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳನ್ನು ಮರಣ ಶಾಸನದ ಮೂಲಕ 2 ರಿಂದ 4 ಮತ್ತು 6 ನೇ ಪ್ರತಿವಾದಿಯರಿಗೆ ಬರೆದುಕೊಟ್ಟಿರುವುದರಿಂದ ನನಗೆ ದಾವಾ ಐಟಂ ನಂ. 1 ಮತ್ತು 6 ರಿಂದ 8 ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಮರಣ ಶಾಸನ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.9 ರಿಂದ 12 ರ ಸ್ವತ್ತುಗಳು ನನ್ನ ಅಣ್ಣ ತಿಮ್ಮೇಗೌಡರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ, ದಾವಾ ಐಟಂ ನಂ. 13 ನನ್ನ ತಂದೆಯ ಹೆಸರಿನಲ್ಲಿದೆ. ನನ್ನ ಅಣ್ಣ ತಿಮ್ಮೇಗೌಡರು

ಹೆಬ್ಬಾಲೆ ಗ್ರಾಮಕ್ಕೆ 1982-83 ರಲ್ಲಿ ಹೋಗಿ ಅಲ್ಲೇ ವಾಸವಿದ್ದರು. ನನ್ನ ಅಣ್ಣ ಹೆಬ್ಬಾಲೆ ಗ್ರಾಮದಲ್ಲಿ ಇದ್ದು ದಾವಾ ಐಟಂ ನಂ.9 ರಿಂದ 12 ಸ್ವತ್ತುಗಳನ್ನು ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದು, ವ್ಯವಸಾಯ ಮಾಡಿಕೊಂಡು ತಮ್ಮ ಜೀವಿತ ಕಾಲವಧಿವರೆಗೆ ಬರುತ್ತಿದ್ದರು ಎಂದರೆ ಸರಿ. ಸದರಿ ಆಸ್ತಿಗಳ ಮೇಲೆ ನನ್ನ ಅಣ್ಣ ಬ್ಯಾಂಕ್ ನಲ್ಲಿ ಸಾಲ ಪಡೆದು ಸದರಿ ಜಮೀನುಗಳಿಂದ ಬಂದ ಆದಾಯದಿಂದ ಸಾಲ ತೀರುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನನ್ನ ಅಣ್ಣ ಪೌತಿಯಾದ ನಂತರ ಅವರ ಹೆಂಡತಿ ಹಾಗೂ ಮಕ್ಕಳು ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನಾನು ಅಥವಾ ನನ್ನ ತಮ್ಮಂದಿರು ಈವರೆಗೂ 1 ನೇ ಪ್ರತಿವಾದಿಯನ್ನು ಬೇಟಿ ಮಾಡಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಹೆಬ್ಬಾಲೆ ಗ್ರಾಮಕ್ಕೆ ಸೇರಿದ ಆಸ್ತಿಗಳ ಮೇಲೆ ನನಗೆ ಯಾವುದೇ ವಿಧವಾದ ಹಕ್ಕಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 13 ರ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ. 13 ರ ಸ್ವತ್ತನ್ನು ನನ್ನ ತಂದೆ ಮರಣ ಶಾಸನ ಪತ್ರದ ಮೂಲಕ 2 ರಿಂದ 4 ಮತ್ತು 6 ನೇ ಪ್ರತಿವಾದಿಯರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 13 ರ ಸ್ವತ್ತಿನಲ್ಲಿ 2 ರಿಂದ 4 ಮತ್ತು 6 ನೇ ಪ್ರತಿವಾದಿಯರು ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ. 13 ರ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು ಹಾಗೂ ಸದರಿ ಸ್ವತ್ತನ್ನು ನನ್ನ ತಂದೆ ವಿಲ್ ಮೂಲಕ 2 ರಿಂದ 4 ಮತ್ತು 6 ನೇ ಪ್ರತಿವಾದಿಗೆ ಬರೆದುಕೊಟ್ಟಿರುವುದರಿಂದ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.14 ರ ಸ್ವತ್ತಿನಲ್ಲಿ ನನಗೆ ಹಾಗೂ 2 ರಿಂದ 4 ಹಾಗೂ 6 ನೇ ಪ್ರತಿವಾದಿಯರಿಗೆ ತಲಾ 14 ಗುಂಟೆ ಜಮೀನು ಹಿಸ್ಸೆ ಬಂದಿದೆ ಎಂದರೆ ಸರಿ. ನಾನು ಹಾಗೂ 2 ರಿಂದ 4 ಹಾಗೂ 6 ನೇ ಪ್ರತಿವಾದಿಯರು ಹಿಸ್ಸೆ ಪಡೆದು ಪ್ರತ್ಯೇಕವಾಗಿ ವಾಸ ಮಾಡುತಾ ಬರುತ್ತಿದ್ದೇವೆ ಎಂದರೆ ಸರಿ.

ದಾವಾ ಐಟಂ ನಂ.15 ರ ಸ್ವತ್ತಿನಲ್ಲಿ 2 ಮತ್ತು 4 ನೇ ಪ್ರತಿವಾದಿಯರಿಗೆ ತಲಾ 12 ಗುಂಟೆ ಜಮೀನು ಹಾಗೂ 6 ನೇ ಪ್ರತಿವಾದಿಗೆ 14 ಗುಂಟೆ ಜಮೀನು ಹಿಸ್ಸೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.16 ಸ್ವತ್ತಿನಲ್ಲಿ ನನಗೆ 6 ಗುಂಟೆ ಹಾಗೂ 3 ನೇ ಪ್ರತಿವಾದಿಗೆ 18 ಗುಂಟೆ ಜಮೀನು ಹಿಸ್ಸೆ ಹೋಗಿದೆ ಎಂದರೆ ಸರಿ.

ದಾವಾ ಐಟಂ ನಂ. 17 ರ ಸ್ವತ್ತು 3 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿದೆ ಎಂದರೆ ಸರಿ.

ದಾವಾ ಐಟಂ ನಂ. 18 ಮತ್ತು 19 ರ ಸ್ವತ್ತುಗಳು ನನ್ನ ತಂದೆಗೆ ಕ್ರಯದ ಮೂಲಕ ಬಂದಿರುವ ಆಸ್ತಿಗಳು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 18 ಮತ್ತು 19 ರ ಸ್ವತ್ತುಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ. 18 ಮತ್ತು

19 ರ ಸ್ವತ್ತುಗಳನ್ನು 3 ರಿಂದ 6 ನೇ ಪ್ರತಿವಾದಿಯರಿಗೆ ನನ್ನ ತಂದೆ ಮರಣ ಶಾಸನ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿ, ಆದರೆ ಆ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ಪೌತಿ ನಂತರ ದಾವಾ ಐಟಂ ನಂ. 18 ಮತ್ತು 19 ರ ಸ್ವತ್ತುಗಳು 3 ರಿಂದ 6 ನೇ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 18 ಮತ್ತು 19 ರ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಿಸ್ಸೆ ಹಕ್ಕಿಲ್ಲ ಹಾಗೂ 3 ರಿಂದ 6 ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

ದಾವಾ ಐಟಂ ನಂ.20 ರ ಸ್ವತ್ತಿನಲ್ಲಿ ನನಗೆ 11 ಗುಂಟೆ ಜಮೀನು ಹಾಗೂ 3 ರಿಂದ 6 ನೇ ಪ್ರತಿವಾದಿಯರಿಗೆ ತಲಾ 5 ಕಾಲು ಗುಂಟೆ ಜಮೀನು ಹಿಸ್ಸೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.20 ರ ಸ್ವತ್ತಿನಲ್ಲಿ ನನಗೆ ಹಾಗೂ 3 ರಿಂದ 6 ನೇ ಪ್ರತಿವಾದಿಯರಿಗೆ ಬಂದ ಹಿಸ್ಸೆಯಲ್ಲಿ ಬೆಳೆ ಬೆಳೆದುಕೊಂಡು ಬರುತ್ತಿದ್ದೇವೆ ಎಂದರೆ ಸರಿ.

ದಾವಾ ಐಟಂ ನಂ.21 ಮತ್ತು 22 ರ ಸ್ವತ್ತುಗಳು ನನ್ನ ತಂದೆಗೆ ಕ್ರಯದ ಮೂಲಕ ಬಂದಂತಹ ಸ್ವತ್ತುಗಳು ಎಂದರೆ ಸರಿ. ದಾವಾ ಐಟಂ ನಂ.21 ಮತ್ತು 22 ರ ಸ್ವತ್ತುಗಳನ್ನು ನನ್ನ ತಂದೆ ದಿಃ 20-03-2013 ರ ಮರಣ ಶಾಸನ ಪತ್ರದ ಮೂಲಕ 2 ರಿಂದ 4 ನೇ ಪ್ರತಿವಾದಿಯರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಇರಬಹುದು. ದಾವಾ ಐಟಂ ನಂ.21 ಮತ್ತು 22 ರ ಸ್ವತ್ತುಗಳಲ್ಲಿಯೂಸ ಸಹಾ ನನಗೆ ಯಾವುದೇ ಹಿಸ್ಸೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.23 ರ ಸ್ವತ್ತಿನಲ್ಲಿ ನನ್ನ ತಂದೆಗೆ 1 ಎಕರೆ 13 ಗುಂಟೆ, 2 ಮತ್ತು 6 ನೇ ಪ್ರತಿವಾದಿಯರಿಗೆ ತಲಾ 1 ಎಕರೆ 6 ವರೆ ಗುಂಟೆ ಜಮೀನು ಹಿಸ್ಸೆಗೆ ಹೋಗಿತ್ತು ಎಂದರೆ ಸಾಕ್ಷಿಯು ನನ್ನ ತಂದೆ ಮಾಡಿಕೊಳ್ಳಿ ಎಂದು ಬಿಟ್ಟಿದ್ದರು ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.24 ರ ಸ್ವತ್ತಿನಲ್ಲಿ ನನ್ನ ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದು ನಾನು ನನ್ನ ಅಜ್ಜನ ಮನೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದೇನೆ ಎಂದರೆ ಸರಿ. ನಾನು ವಾಸಮಾಡುತ್ತಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ, ಅದರ ಖಾತೆ ನಂಬರ್ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು